ತಾರೀಖು 24ನೇ ಅಕ್ಟೋಬರ್ 1884.

ಕ್ರೋಸ್‌ಪೇಟೆ ಮತ್ತು ಹೊಸಕೋಟೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ದೇವಾರಸಾಗಿ ಯಿರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನು ಹಾಜರ್ ಮಾಡಿದವರೆ ಆಗಲಿ ಅಥವಾ ವಾಪಸ್‌ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರಹೊಂದಿದ ಮುತಾಲೀಕರಾಗಲಿ ಈ ನೋಟೀಸ್ ತಾರೀಖು ಲಾಗಾಯತು ಬಂದು ತಿಂಗಳ ಒಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ ಆಫೀಸಿಗಳಲ್ಲಿ ಹಾಜರಾಗಿ ವಾಪಸ್ ತೆಗದು ಕೊಳ್ಳಿಬೇಕು, ತಪ್ಪಿದರೆ ಸ್ ೧೮೭೭ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುತ್ತೆ:—

ತಾಲ್ಲೂಕು ಹೆಸರು.	ದಸ್ತಾವೇಜು ನಂಬರ್.	ದಸ್ತಾವೇಜು ಹಾಜರಾದ ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯಾದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರದುಕೊಂಡವರ ಹೆಸರು, ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಕ್ರೋಸ್‌ಪೇಟೆ ತಾಲ್ಲೂಕು.	35 / 82—83	24 6 82	29 6 82	29 6 82	ಕ್ರೋಸ್‌ಪೇಟೆ ಕಸಬಾ ಬಸ್ತಿಯಲ್ಲಿರುವ ಅಗಬರ್‌ಸಾಬರ ಮಮ್ಮದ್‌ಸಾಬರ ಮಗ ಮಹಮ್ಮದ್ ಹಿಸಿಹಾಕ್‌ಸಾಬ್	ಕ್ರೋಸ್‌ಪೇಟೆ ಕಸಬಾ ಬಸ್ತಿಯಲ್ಲಿರುವ ಸೈಯದ್ ದಾವೂದ್‌ಸಾಬರ ಮಗ ಸೈಯದ್‌ಅಹಮ್ಮದ್‌ಸಾಬ್.	ಬಿಟ್ಟಿಹಳ್ಳಿ ಗ್ರಾಮದ 51ನೇ ನಂಬರ್ ಬಾಗಾಯಿತು ಜಮ್ಮಿ 130 ರೂಪಾಯಿಗಳಿಗೆ ಕ್ರಯಮಾಡಿ ಇರುವದಾಗಿ.
ಹೊಸಕೋಟೆ ತಾಲ್ಲೂಕು.	96 / 82—83	17 8 82	17 8 82	17 8 82	ಹೊಸಕೋಟೆ ತಾಲ್ಲೂಕು ನಂದಗುಡಿ ನಾಗಪ್ಪನವರ ಮಗ ವೆಂಕಟಕೃಷ್ಣಪ್ಪ.	ಕೋರಟಿಗೆರೆ ತಾಲ್ಲೂಕು ಹೊಳವನಹಳ್ಳಿ ಶೇಷಾಚಾರ್	ನಂದಗುಡಿ ಹೋಬಳಿ ಅಗ್ರಹಾರದ ವಡಹಳ್ಳಿ ಗ್ರಾಮದಲ್ಲಿ ತನ್ನ ಹಿಸ್ಸೆ ಗ್ರಾಮವನ್ನು 500 ರೂಪಾಯಿಗಳಿಗೆ ಕ್ರಯಮಾಡಿ ಇರುವದಾಗಿ.

ಇ. ಸಿ. ಷಣ್ಮುಗವೇಲುಪಿಳ್ಳೈ,
ಫಾರ್ ರಿಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಿಂದ.

ಇಸ್ತಿಹಾರ್ ನಾಮೆ.

ತಾರೀಖು 16ನೇ ಅಕ್ಟೋಬರ್ 1884.

ಸ್ ೧೮೮೪ನೇ ಇಸವಿ ನವೆಂಬರ್ ಗುರ್ರೇ ಲಾಗಾಯತು ಸ್ ೧೮೮೫ನೇ ಇಸವಿ ಅಕ್ಟೋಬರ್ 31ನೇ ತಾರೀಖು ವರೆಗೆ ಬಂದು ಸಾಲ್ ವರಿಗೆ ದೇವರಾಯದುರ್ಗದ ಫಾರೆಸ್ಟಿನಿಂದ ತುಮಕೂರು ರೈಲ್ವೇ ಸ್ಟೇಷನಿಗೆ (ಫಾಸಲೆ 8ರ ಲಾಗಾಯತು 12 ಮೈಲ್) ಮಾಹೆಯಾನಾ 200ಟ್ಸ್ ಅಥವಾ ಜಾಸ್ತಿ ಸಾದೆ ಸರಬರಾಯಿ ಮಾಡುವ ಬಗ್ಗೆ ಸ್ ಮಜಕೂರ್ ನವಂಬರ್ 15ನೇ ತಾರೀಖು ವರೆಗೆ ಈ ಆಫೀಸಿನಿಂದ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ತೆಗಿಯಲ್ಪಡುವವು.

2. ಕಂಟ್ರಾಕ್ಟದಾರನು ಪ್ರತಿತಿಂಗಳ ಗುರ್ರೇ ತಾರೀಖಿಗೆ ಮೇಲೆ ನಮೂದಿಸಿದ ಮೊತ್ತದ ಸಾದೆಯನ್ನ ತುಮಕೂರು ಸ್ಟೇಷನ್‌ಬಳಿ ಕೊಡಬೇಕು. ಈರೀತಿ ನಡಿಸತಕ್ಕ ಬಗ್ಗೆ ಕಂಟ್ರಾಕ್ಟದಾರನು ಮೊಂದು ತಿಂಗಳಿಗೆ ಸಪ್ಲೈಮಾಡಬೇಕಾದ ಸಾದೆಯನ್ನ ಮುಂಚಿತವಾಗಿ ಸ್ಟೇಷನ್‌ಬಳಿ ಜಮಾಯಿಸಿಕೊಂಡಿರಬಹುದು.

3. ಗಿಡಗಳು ಕತ್ತಾಯಿಸತಕ್ಕ ವಿಧ ಮತ್ತು ಸಾದೆ ಕತ್ತಾಯಿಸುವ ಜಾಗ ಸಹ ಫಾರೆಸ್ಟು ಇಲಾಖೆಯವರಿಂದ ಗೊತ್ತು ಮಾಡಲ್ಪಡುತ್ತೆ.

4. ಕಂಟ್ರಾಕ್ಟಿನ ಷರತ್ತುಗಳ ಡೇಖೀಲ್ ಹೆಚ್ಚಿಗೆ ತಪಸೀಲ್‌ಗಳು ಈ ಆಫೀಸಿನಿಂದ ಮೊಖ್ತಾ ಆಗಲಿ ಅಥವಾ ಅರ್ಜೀ ಮೂಲಕವೇ ಆಗಲಿ ತಿಳಿದುಕೊಳ್ಳಬಹುದು.

5. ತುಮಕೂರು ಸ್ಟೇಷನಿಗೆ ಸಾದೆಯು ಯಾವ ಕಮ್ಮಿ ದರಕ್ಕೆ ಕಂಟ್ರಾಕ್ಟದಾರು ಸರಬರಾಯಿ ಮೊಡಲು ಒಪ್ಪುತ್ತಾರೋ ಆಂಥಾ ಕಮ್ಮಿ ದರವನ್ನ ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಡಬೇಕು, ನಗದಾಗಿಯಾಗಲಿ ಕರೆನ್ಸಿನೋಟ್‌ಗಳ ಮೂಲಕವಾಗಿಯಾಗಲಿ